

ನ್ಯಾಯಾಲಯದಲ್ಲಿ ವಾದ ಪ್ರತಿವಾದ ಮಂಡನೆ, ವಿಚಾರಣೆ ನಡೆದ ಬಳಿಕ, ತೀರ್ಪು ಮಾಲೀಕರ ಪರವಾಗಿಯೇ ಬಂತು. 'ಬಾಡಿಗೆ ಮನೆ ಬಿಟ್ಟುಕೊಡಿ' ಎಂದು ಕೋರ್ಟ್ ನೋಟಿಸ್ ನೀಡಲು ಅಮೀನ, ಆ ಮನೆಗೆ ಹೋದಾಗ, ಬಾಡಿಗೆ ಮನೆ ಯಜಮಾನ ಒಂದು ತಂತ್ರ ಹೂಡಿದ. ತನ್ನ ಹೆಂಡತಿ ಮತ್ತು ಮಗಳನ್ನು ಹೊಸ್ತಿಲಲ್ಲಿ ಕುಳಿತುಕೊಳ್ಳುವಂತೆ ಹೇಳಿ, ನೋಟಿಸ್ ತೆಗೆದುಕೊಳ್ಳಲು ನಿರಾಕರಿಸಿದ. ಮನೆ ಮಾಲೀಕರು, ಹಿತೈಷಿಗಳು ಯಾರೇ ಬಂದರೂ ಹೆಂಡತಿ ಮತ್ತು ಮಗಳನ್ನು ಹೊಸ್ತಿಲ ಮೇಲೆ ಕುಳ್ಳಿರಿಸಿ, 'ಮನೆ ಬಿಟ್ಟುಕೊಡುವುದಿಲ್ಲ' ಎಂದು ಅವರ ಬಾಯಲ್ಲಿ ಹೇಳಿಸುವುದು ವಾಡಿಕೆ ಆಯಿತು. ಬಾಡಿಗೆದಾರ ಬೇರೆ ಮನೆಗೆ ಹೋಗಲಾರದಷ್ಟು ಬಡವನಲ್ಲ. ಅನುಕೂಲಸ್ಥ ಕುಟುಂಬವೇ ಅದಾಗಿತ್ತು. ಆದರೆ, ಬಾಡಿಗೆದಾರನಿಗೆ ಹೋರಾಟ ಮುಂದುವರೆಸಲು ಗುರಾಣಿಯಾಗಿ ಸಿಕ್ಕಿದ್ದು, ತನ್ನ ಹೆಂಡತಿ ಮತ್ತು ಸ್ವಂತ ಮಗಳು. ಮಹಿಳೆಯರನ್ನು ದಾಟಿ ಯಾರೂ ಮನೆ ಖಾಲಿ ಮಾಡುವಂತೆ ಬಲ ಪ್ರಯೋಗ ಮಾಡಲಾರರು ಎಂಬುದು ಅವನೊಳಗಿನ ವಿಶ್ವಾಸ.

ಮೇಲಿನ ಪ್ರಕರಣದಲ್ಲಿ ಹೆಂಡತಿ ಮತ್ತು ಮಗಳಿಗೆ ಹೀಗೆ ಹೊಸ್ತಿಲ ಮೇಲೆ ಕುಳಿತುಕೊಳ್ಳಲು ಇಷ್ಟವಿತ್ತೇ? ಬಾಡಿಗೆ ಮನೆ ಬಿಟ್ಟುಕೊಡದೇ ಹೋರಾಟ ಮಾಡುವುದಕ್ಕೆ ಅವರ ಸಮ್ಮತವಿತ್ತೇ ಅಥವಾ ಮನೆಯ ಯಜಮಾನ ಹೇಳಿದಂತೆ, ಹೊಸ್ತಿಲ ಮೇಲೆ ಕುಳಿತುಕೊಳ್ಳುವುದಿಲ್ಲ ಎಂದು ಹೇಳುವ ಆಯ್ಕೆ ಅವರಿಬ್ಬರಿಗೂ ಇತ್ತೇ? ಇಂಥ ಈ ಪ್ರಕರಣದಲ್ಲಿ ಮಹಿಳೆಯರಿಬ್ಬರೂ ಕಾನೂನಿನ ಅಥವಾ ಸಮಾಜದ ಸೌಜನ್ಯದ ದುರುಪಯೋಗ ಮಾಡಿಕೊಂಡರೆ? ಪ್ರಶ್ನೆಗಳಿಗೆ ಉತ್ತರಗಳು ಎಲ್ಲರಿಗೂ ಗೊತ್ತಿರುವಂತಹುದೇ. ಆದರೆ ಮನಸ್ಸಿಗೆ ಗೊತ್ತಿರುವ ಎಷ್ಟೋ ಅಂಶಗಳನ್ನು ಹಾಗೆಯೇ ಮರೆತು, ಟೀಕೆ ವ್ಯಕ್ತಪಡಿಸುವುದೇ ಹೆಚ್ಚು ಜನರು ಮಾಡುವ ಕೆಲಸ.

## ಕಾನೂನುಗಳ ಉದ್ದೇಶ ಶಿಕ್ಷೆಯಲ್ಲ

ನಮ್ಮ ರಕ್ಷಣೆಗಾಗಿ ರೂಪಿಸಿಕೊಂಡ ವ್ಯವಸ್ಥೆಗಳು ಅಥವಾ ನಿಯಮಗಳು ಬಹಳ ಪರೋಕ್ಷವಾಗಿ, ಅರಿವೇ ಆಗದಂತೆ ನಮ್ಮನ್ನೇ ಇರಿಯುವ ಪ್ರಕ್ರಿಯೆಗೆ ಸಹಕಾರಿಯಾಗಿಬಿಟ್ಟರೆ, ಸಾಮಾಜಿಕ ವ್ಯವಸ್ಥೆ ಎಂಬುದು ಸುರಕ್ಷೆಯತ್ತ ಸಾಗುವುದಾದರೂ ಹೇಗೆ? ಕಾನೂನು, ನಿಯಮ, ಮಾರ್ಗದರ್ಶಿ ಸೂತ್ರಗಳ ನಿರ್ದಿಷ್ಟ ಆಶಯವೇನಿದ್ದರೂ, ಅವುಗಳೆಲ್ಲದರ ಪ್ರಧಾನ ಕಾಳಜಿ ಸಾಮಾಜಿಕ ವ್ಯವಸ್ಥೆಯು ಸುರಕ್ಷೆಯಿಂದ ಹಾಗೂ ನೆಮ್ಮದಿಯಿಂದ ಕೂಡಿರಲಿ ಎನ್ನುವುದೇ ಹೊರತು, ನಿಯಮಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ನೀಡಬೇಕು ಎನ್ನುವುದಲ್ಲ. ಹಾಗೆ ನೋಡಿದರೆ ಶಿಕ್ಷೆಯ ಮೊತ್ತ ಎಷ್ಟೇ ದೊಡ್ಡದಾಗಿದ್ದರೂ, ಅದು ಆಗಿಹೋದ ಬಿರುಕನ್ನು ಎಲ್ಲ ಸಂದರ್ಭಗಳಲ್ಲಿಯೂ ಮುಚ್ಚಲು ಸಹಾಯ ಮಾಡುವುದು ಸಾಧ್ಯವಿಲ್ಲ. ಪ್ರಾಣಿಗಳಿಗಿಂತ ಭಿನ್ನವಾಗಿ ಚಿಂತನೆಯ ಸಾಮರ್ಥ್ಯ ಮತ್ತು ವಿವೇಕವನ್ನು ಹೊಂದಿರುವ ಮನುಷ್ಯರು, ತಪ್ಪುಗಳನ್ನು, ಉಲ್ಲಂಘನೆಗಳನ್ನು ಪದೇ ಪದೇ ಮಾಡಬಾರದು ಎಂಬುದಾಗಿ ಅರಿವು ಮೂಡಿಸಲು ಶಿಕ್ಷೆಗಳು ಸಹಕಾರಿಯಾಗಿರುತ್ತವೆ. ಅವುಗಳ ಪ್ರಾಥಮಿಕ ಆಶಯವೇನಿದ್ದರೂ ತಪ್ಪುಗಳು, ಅಪರಾಧಗಳು ಘಟಿಸಬಾರದು ಎಂಬುದೇ ಆಗಿದೆ.

ನಮ್ಮ ವ್ಯವಸ್ಥೆಯ ಸೂತ್ರವನ್ನು ಹಿಡಿದಿರುವ ರಾಜಕೀಯ ನಾಯಕರು ಸಿ.ಡಿ. ಪ್ರಕರಣದ ಕುರಿತು ನಡೆಸುತ್ತಿರುವ ಚರ್ಚೆ, ಮಾತುಕತೆಗಳು, ವಾದ ಪ್ರತಿವಾದಗಳನ್ನು ಗಮನಿಸುವಾಗಲೂ ಮೇಲಿನ

# ನೋಟ ಬದಲಾಗಬೇಕು...



ಮಹಿಳೆಯ ರಕ್ಷಣೆಗಾಗಿ ಇರುವ ಕಾನೂನುಗಳನ್ನು ಮಹಿಳಾ ವರ್ಗದ ಒಟ್ಟು ಏಳಿಗೆಗೆ ವಿರುದ್ಧವಾಗಿ ಬಳಕೆ ಮಾಡುವಂತಹ ಪರಿಸ್ಥಿತಿ ಸೃಷ್ಟಿಯಾಗುವುದು ವಿಪರ್ಯಾಸ. ವೈದ್ಯಕೀಯ ಕ್ಷೇತ್ರದತ್ತ ಗಮನ ಹರಿಸಿದರೆ ಮಹಿಳೆಯ ಪರವಾಗಿ ನಿಲ್ಲಬಹುದು ಎಂಬ ಭರವಸೆ ಮೂಡಿಸಿದ ಎಷ್ಟೋ ಆವಿಷ್ಕಾರಗಳು, ತಂತ್ರಜ್ಞಾನಗಳು ಆಕೆಯ ಒಟ್ಟಾರೆ ಏಳ್ಗೆಯ ವಿರುದ್ಧವೇ ಬಳಕೆಯಾಗುತ್ತಿರುವುದು ಇನ್ನೊಂದು ವಿಪರ್ಯಾಸ. ಮಾತ್ರೆಗಳನ್ನು ಬಳಸಿ ಮುಟ್ಟು ಮುಂದೂಡುವಂತೆ ಆಕೆಗೆ ಬಲವಂತ ಮಾಡುವ ಪರಿಪಾಠವಂತೂ ಈಗ ಎಲ್ಲ ಕಡೆ ಸಾಮಾನ್ಯ ಎಂಬಂತಾಗಿದೆ.

ತಾಯಿಯೊಬ್ಬಳಿಗೆ ಅಂಗ ಊನವಾಗಿರುವ ಮಗುವನ್ನು ಸಾಕುವುದು ದುಸ್ತರವೆನಿಸುವಂತಹ ಪರಿಸ್ಥಿತಿ ಸೃಷ್ಟಿಯಾಗಬಾರದು ಎಂಬ ಉದ್ದೇಶದಿಂದ 'ಲಿಂಗಪತ್ತೆ ಪರೀಕ್ಷೆ' ತಂತ್ರಜ್ಞಾನ ಬಂದಿರಬಹುದು. ಆದರೆ ಅದರ ಬಳಕೆಯಿಂದ ಇಂದು ಜಗತ್ತಿನಲ್ಲಿ ಹೆಣ್ಣು ಸಂತತಿಯೇ ಕಡಿಮೆಯಾಗುತ್ತ ಬರುವಂತಾಗಿದೆ. ಹೊಟ್ಟೆಯಲ್ಲಿರುವ ಮಗುವಿನ ಅವಯವಗಳು ಕ್ಷೇಮವಾಗಿವೆಯೇ ಎಂದು ನೋಡುವ ಬದಲಾಗಿ, ಲಿಂಗವನ್ನು ನೋಡಿ, ಅದರ ಜೀವನ ಮರಣವನ್ನು ನಿರ್ಧರಿಸುವುದಾದರೆ, ಯಾವ ತಂತ್ರಜ್ಞಾನದಿಂದ ಏನು ಲಾಭ? ನೋಡುವ ಕಂಗಳು ಬದಲಾಗಬೇಕಷ್ಟೇ.

80ರ ದಶಕದಲ್ಲಿ ರಿಪ್ರೊಡಕ್ಟಿವ್ ತಂತ್ರಜ್ಞಾನವನ್ನು ಕಂಡು ಹಿಡಿದಾಗಲೂ, ಅದರ ಸಾಧಕ ಬಾಧಕಗಳ ಬಗ್ಗೆ ವಿಜ್ಞಾನಿಗಳು ಎಚ್ಚರಿಕೆಯ ಮಾತುಗಳನ್ನು ಹೇಳಿದ್ದರು. ಸ್ತ್ರೀ ಜನನಾಂಗ ವಿರೂಪಗೊಳಿಸಲು ವೈದ್ಯಕೀಯ ತಂತ್ರಜ್ಞಾನದ ಬಳಕೆ, ಹೆಣ್ಣಿನ ಸೌಂದರ್ಯವೆಂದರೆ ಹೀಗೇ ಇರಬೇಕು ಎಂಬ ಪೂರ್ವಗ್ರಹಕ್ಕೆ ಶರಣಾಗುವಂತೆ ಮಾಡುವ ಪ್ಲಾಸ್ಟಿಕ್ ಸರ್ಜರಿ, ಕಾಸ್ಮೆಟಿಕ್ ಇಂಡಸ್ಟ್ರಿ – ಈ ಎಲ್ಲ ಕ್ಷೇತ್ರಗಳೂ 'ಮಹಿಳೆಯು ಹೀಗೆಯೇ ಇರಬೇಕು' ಎಂಬುದಾಗಿ ಗೆರೆ ಹಾಕಿ ಚೌಕಟ್ಟನ್ನು ರೂಪಿಸಿ, ದೊಡ್ಡ ಉದ್ಯಮವನ್ನೇ ತಮ್ಮ ಸುತ್ತ ಸೃಷ್ಟಿಸಿಕೊಂಡಿವೆ. ಭಾರತದ ಕಾಸ್ಮೆಟಿಕ್ ಇಂಡಸ್ಟ್ರಿಯ ಗಾತ್ರ 950 ದಶಲಕ್ಷ ಡಾಲರ್! ಮುಂದಿನ ದಶಕದ ಹೊತ್ತಿಗೆ ಪ್ರಪಂಚದ ಅತಿ ಹೆಚ್ಚು ಕಾಸ್ಮೆಟಿಕ್ ವಸ್ತುಗಳ ಗ್ರಾಹಕರು ನಮ್ಮ ದೇಶದವರೇ ಆಗಿರುತ್ತಾರೆ. ಬೊಕ್ಕತಲೆ, ಕೂದಲ ಸೀಳು, ಮೊಡವೆ, ಮುಖದ ಸುಕ್ಕು – ಇವೆಲ್ಲ ಸಾವು ಬದುಕಿನ ಪ್ರಶ್ನೆ ಹುಟ್ಟಿಸುವ ಸಮಸ್ಯೆಗಳೇ ಅಲ್ಲ. ಆದರೆ ಅವುಗಳ ಬಗೆಗೆ ಕೋಟ್ಯಂತರ ರೂಪಾಯಿ ಔಷಧ ವಹಿವಾಟು ನಡೆಯುತ್ತವೆ ಎಂದರೆ ಮುಂದಿನ ವಿಚಾರ ಊಹೆಗೆ ನಿಲುಕದ್ದೇನಲ್ಲ.

—ಡಾ. ಎಚ್. ಎಸ್. ಅನುಪಮಾ, ವೈದ್ಯೆ, ಲೇಖಕಿ